13

# ಸುಳ್ಳು ಪ್ರವಾದಿಗಳ ಕುರಿತಾಗಿ ಎಚ್ಚರವಾಗಿರಿ (2 ಪೇತ್ರ 2:1-22)

ನಾವು ದೇವರ ಕೃಪೆಯನ್ನು ಹೊಂದಿರುವಾಗ, ಮೋಸಕ್ಕೊಳಗಾದರೆ ಅದು ಬಹಳ ಕಷ್ಟಕರವಾದ ಸಂಗತಿಯಾಗಿರುತ್ತದೆ.

ಸಭೆಗಳಲ್ಲಿ ಸುಳ್ಳು ಪ್ರವಾದಿಗಳು ಉಂಟು ಮಾಡುತ್ತಿದ್ದ ವೈಮನಸ್ಸಿನ ಕುರಿತಾಗಿ ಪೇತ್ರನು ವಿವರಣೆಯನ್ನು ನೀಡುತ್ತಿದ್ದನು, ಅವನು ಕ್ರೈಸ್ತರಿಗೆ, "ನೀವು ಮೋಸಕ್ಕೊಳಗಾಗುವ ಹಾದಿ ಯಲ್ಲಿದ್ದೀರಿ" ಎಂದು ತಿಳಿಸಿದನು. ಒಂದು ವೇಳೆ ಕಾಲ ಕ್ರಮೇಣ ಬದಲಾಗುವ ಮೋಸಕರ ವಾದ ಸಿದ್ಧಾಂತಗಳ ಕುರಿತು ಇರಬಹುದು. ಮೋಸವು ಯಾವಾಗಲೂ ಇರುತ್ತದೆ. ಪ್ರವಾದಿಗಳ ಫಲ ಮತ್ತು ಜೀವನ ಶೈಲಿಯು ಪ್ರಮುಖವಾದ ಅಂಶವಾಗಿದೆ. ಒಂದು ವೇಳೆ ಪೇತ್ರನು, ಅವರು ನೀಡಿದ ಬೋಧನೆಗಳನ್ನು ಸಿದ್ಧಾಂತಗಳನ್ನು ಎದುರಿಸಬಹುದು.

## ಸುಳ್ಳು ಪ್ರವಾದಿಗಳು ಸತ್ಯವನ್ನು ಅಲ್ಲಗಳೆಯುತ್ತಾರೆ (2:1-9)

ಎದುರು ಹಾಕಿಕೊಳ್ಳುವುದು ಕ್ಷೇಮವಲ್ಲ. ಸಾಧ್ಯವಾದಷ್ಟು ಅಂಥವರನ್ನು ನಾವು ದೂರವಿಡುತ್ತೇವೆ, ಅವರನ್ನು ಎದುರಿಸದೆ ಇರುವುದು ನಮ್ಮ ಬಲಹೀನತೆಯಾಗಿರುತ್ತದೆ. ಉತ್ತಮವಾದದ್ದನ್ನು ಅರಿತಿರುವ ಸ್ತ್ರೀ ಪುರುಷರು ಸುಮ್ಮನೆ ಕೂತುಕೊಂಡಿದ್ದರೆ, ಅನೇಕ ಅವಗಡಗಳು ಜರುಗುತ್ತವೆ, ಸ್ವ-ಚಿತ್ತವನ್ನು, ಸ್ವಾರ್ಥಸೇವೆಯನ್ನು ಬಯಸುವವರು ಅಧಿಕಾರವನ್ನು ನಡೆಸುವರಾಗುತ್ತಾರೆ, "ನಾವು ಓದುವ ಹಾಗೆ, ದುಷ್ಟರಿಂದ ಸೋತ ಶಿಷ್ಟನು ಹಾಳು ಬಾವಿ, ತುಳಿದಾಡಿದ ಒರತೆ" (ಜ್ಞಾನೋಕ್ತಿ 25:26). ನಾವು ದೇವರನ್ನು ಗೌರವಿಸುವುದಾದರೆ, ಆತನ ಸಿದ್ದಾಂತಗಳನ್ನು ಪರಿಶುದ್ಧವಾಗಿ ಇಟ್ಟುಕೊಳ್ಳಬೇಕು, ಒಳ್ಳೆಯ ಮತ್ತು ತಿಳುವಳಿಕೆಯುಳ್ಳ ಜನರು ಮಾತನಾಡುವದಕ್ಕೆ ಧೈರ್ಯವುಳ್ಳವರಾಗಿರ ಬೇಕು. ಪೇತ್ರನ ಓದುಗರಲ್ಲಿ ಕೆಲವರನ್ನು ಸುಳ್ಳು ಪ್ರವಾದಿಗಳು ಆಕರ್ಷಿಸಿದ್ದರು, ಆದರೆ ಇತರರು ಮೌನವಾಗಿದ್ದರು. ನಂಬಿಗಸ್ತರಾದವರು ಸತ್ಯದಲ್ಲಿ ದೃಢವಾಗಿ ನಿಲ್ಲಬೇಕು ಎಂದು ಪೇತ್ರನು ಬಯಸಿದನು.

### ಅವರ ಬರುವಿಕೆಯನ್ನು ನಿರೀಕ್ಷಿಸುವುದೇ

ಹಳೇ ಮತ್ತು ಹೊಸ ಒಡಂಬಡಿಕೆಗಳಲ್ಲಿ ಎಚ್ಚರಿಕೆ ನೀಡಿದಾಗ್ಯೂ, ಸಭೆಗಳು ರಣರಂಗವಾಗಿರದೇ ತುಪ್ಪಳದ ಹಾಸಿಗೆಯಾಗಿರಬೇಕೆಂದು ಕೆಲವರು ಬಯಸುತ್ತಾರೆ. ಹಳೇ ಒಡಂಬಡಿಕೆಯಲ್ಲಿ ಅನೇಕ ಸುಳ್ಳು ಪ್ರವಾದಿಗಳಿದ್ದರು (2:1). ಯೆರುಸಲೇಮಿನಲ್ಲಿ ಎಲ್ಲವು ಸರಿಯಿರುತ್ತದೆ, ದೇವರು ತನ್ನ ಆಲಯವನ್ನು ನಾಶಪಡಿಸಲು ಬಿಡುವದಿಲ್ಲ, ದಾವೀದ ಕುಮಾರನು ತನ್ನ ಪ್ರಜೆಗಳನ್ನು ಯಾವಾಗಲೂ ಆಳುವನು ಎಂದು ಪ್ರಬೋದಿ ಸುತ್ತಿದ, ಸುಳ್ಳು ಪ್ರವಾದಿಗಳಿಗೆ ವಿರುದ್ಧವಾಗಿ ಯೆರೆಮೀಯನು ನಿಂತನು, ಯೆರೆಮೀಯನು ಪ್ರಸಿದ್ಧಿಯಾಗದ ಪ್ರಸಂಗವನ್ನು ಮಾಡಲು ಮಾತ್ರ ಬಾರವುಳ್ಳವನಾಗಿರದೆ, ದೇವರಿಂದ ಸಂದೇಶವನ್ನು ತಾವುಗಳು ಸಹ ಹೊಂದಿದ್ದರೆಂದು ತಿಳಿದಿದ್ದವರಿಂದ ಹಿಂಸೆಯನ್ನು, ಅಪಮಾನವನ್ನು ಹೊಂದಿದನು.

ಅಲ್ಲಿ ಆ ರೀತಿಯ ಸುಳ್ಳು ಪ್ರವಾದಿಗಳು ಇದ್ದಂತೆ, ಸಭೆಯಲ್ಲಿಯೂ ಸುಳ್ಳು ಪ್ರವಾದಿಗಳು ಏಳುವರು ಎಂದು ಪೇತ್ರನು ತನ್ನ ಓದುಗರಿಗೆ ದೃಢಪಡಿಸಿದನು (2:1). ಎಫೆಸದ ಸಭೆಯವರಿಗೂ ಪೌಲನು ಇದೇ ರೀತಿಯಾದ ಎಚ್ಚರಿಕೆಯನ್ನು ನೀಡಿದನು: "ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು, ಅವು ಹಿಂಡನ್ನು ಕನಿಕರಿಸುವದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು" (ಅಪೊಸ್ತಲರಕೃತ್ಯಗಳು 20:29, 30). ಈ ಎಚ್ಚರಿಕೆ ನೀಡಿದಾಗ್ಯೂ, ಸಭೆಯ ಸಮಾಧಾನವನ್ನು ಗೊಂದಲಮಾಡುವ ಸುಳ್ಳು ಪ್ರವಾದಿಗಳ ಕುರಿತಾಗಿ ಕ್ರೈಸ್ತರು ಆಶ್ಚರ್ಯಪಡುತ್ತಾರೆ, ಈ ಗೊಂದಲದ ನಿಮಿತ್ತ, ಕೆಲವು ಕ್ರೈಸ್ತರು ಸೋತವರಾಗಿ ಕೃಪೆಯಿಂದ ಜಾರಿದು ಹೋಗುತ್ತಾರೆ (2:2).

ನಾವು ಪೇತ್ರನ ಕೇಳುಗರಾಗಿದ್ದರೆ, ನಾವು ಕ್ರಿಸ್ತನ ಸಿದ್ಧಾಂತಗಳು ತಿಳಿದವರಾಗಿ, ಧಾರ್ಮಿಕ ತಪ್ಪುಗಳನ್ನು ಎದುರಿಸುವಂಥ ಕ್ರೈಸ್ತರಾಗಿಬೇಕು. ಸುಳ್ಳು ಪ್ರವಾದಿಗಳು ವಕ್ರಬುದ್ಧಿಯಿಂದ ನಾಶಕರವಾದ ದರ್ಬೋಧನೆಗಳನ್ನು ತರುವರು. ಅವರು ಮತ್ತು ಅವರಿಂದ ಮೋಸಕ್ಕೆ ಒಳಗಾದವರು ಸತ್ಯದ ಮಾರ್ಗವನ್ನು ಅಪಾರ್ಥಕ್ಕೆ ತರುವರು.

**ದೇವರೇ ಅವರ ನ್ಯಾಯಧಿಪತಿಯಾಗಿದ್ದಾನೆ**

ಕ್ರೈಸ್ತರು ಸುಳ್ಳು ಬೋಧಕರನ್ನು ಹಿಂಬಾಲಿಸಬಹುದು, ಅಥವಾ ಅವರ ದುರ್ಬೋಧನೆಗಳನ್ನು ಖಂಡಿಸಬಹುದು ಅಥವಾ ಖಂಡಿಸದೆ ಇರಬಹುದು. ಅಂತಿಮವಾಗಿ ದೇವರೇ ಅವರಿಗೆ ನ್ಯಾಯಧಿಪತಿಯಾಗಿರುತ್ತಾನೆ. ವಿರುದ್ಧವಾದವರನ್ನು ದೇವರು ನ್ಯಾಯ ತೀರ್ಪು ಮಾಡುತ್ತಾನೆ, ಮತ್ತು ದೇವರಿಗೆ ತಿರುಗಿ ಬೀಳುವದಕ್ಕೆ ಸಿದ್ಧವಾಗುತ್ತಿರುವವರಿಗೂ ನ್ಯಾಯತೀರಿಸುತ್ತಾನೆ ಎಂದು ಪೇತ್ರನು ತಿಳಿಸಿದನು. ಅಪೊಸ್ತಲನು "ಒಂದು ವೇಳೆ ನಂತರ" ಕಾರಣ ನೀಡಲು ಕಾರಣವಿರುವದಿಲ್ಲ ಎಂದನು. ಇದರ ಕುರಿತು ಆಸಕ್ತಿಕರವಾದ ದೃಷ್ಟಾಂತವನ್ನು ತಿಳಿಸಿದನು.

ಹೇಗಂದರೆ ದೇವದೂತರು ಪಾಪಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿದನು ಎಂದು ಹೇಳಿದನು (2:4), ಹವಲು ಕ್ರೈಸ್ತರು ಸೈತಾನನು ದೇವರಿಗೆ ವಿರೋಧವಾಗಿ ದಂಡೆಯೆದ್ದವನೆಂದು ಮತ್ತು ದೇವರ ಬಳಿಯಿಂದ ದಬ್ಬಲ್ಪಟ್ಟು ಭೂಮಿ ಮೇಲೆ ಮಾನವನರನ್ನು ಶೋಧಿಸುವಾತನು ಮತ್ತು ವಿರೋಧಿಯಾಗಿಯೂ ಸುತ್ತುದಿದ್ದನು ಎಂದು ಹೇಳಲಾಗಿದೆ. 2:4ರಲ್ಲಿ ಸೈತಾನನ ಕುರಿತಾದ ಊಹೆಯನ್ನು ಮಾಡಬಹುದು ಇದಕ್ಕಿಂತಲೂ ಹೆಚ್ಚಾಗಿ ದೇವದೂತರ ಬಗ್ಗೆ ನಮಗೆ ತಿಳಿದಿರುವದಿಲ್ಲ, ಅವನ ಮೂಲವನ್ನಾಗಲ್ಲಿ ಅಥವಾ ಇತಿಹಾಸವನ್ನಾಗಲೀ ತಿಳಿದಿರುವದಿಲ್ಲ. ಹೆಚ್ಚು ತಿಳಿಯುವ ಬಯಕೆ ಸ್ವಾಭಾವಿಕವಾದದ್ದೆ, ಆದರೆ ದೇವರು ಎಷ್ಟನ್ನು ಪ್ರಕಟಪಡಿಸಿದ್ದಾನೋ, ಅಷ್ಟರಲ್ಲೇ ತೃಪ್ತಿಗೊಳ್ಳಬೇಕು.

ಸೈತಾನನ ವಿಷಯ ಬರುವಾಗ ಕೆಲವು ಬೈಬಲ್ ಭಾಗಗಳನ್ನು ಯಾವಾಗಲೂ ವ್ಯಾಖ್ಯಾನಿಸುತ್ತೇವೆ. ಅದರಲ್ಲಿ ಒಂದು ಯೆಶಾಯ 14:12 KJVಯ ಇಬ್ರಿಯ ಪದ "ಉದಯ ನಕ್ಷತ್ರ" ಲ್ಯಾಟಿನ್ ಭಾಷೆಯಲ್ಲಿ "ಲೂಸಿಫರನು," ಅದರ ಅರ್ಥ ಒಂದೇ ಆಗಿರುತ್ತದೆ. ಇಲ್ಲಿ ಬಾಬಿಲೋನಿನ ಅರಸನ ಮಹಿಮೆಯ ಕುರಿತಾದ ಹಿನ್ನೆಲೆಯಿಂದ ಹೇಳಲಾಗಿದೆ. ಇದರ ಸೂಚನೆಯ ಗುರುತಾಗಿ "ಉದಯ ನಕ್ಷತ್ರ," ಎಂದು ಅಂತ್ಯನಾಶನದ ಕುರಿತು ಹೇಳಲಾಗಿದೆ, ಸೈತಾನನ ಕುರಿತಾಗಿ ವ್ಯಾಖ್ಯಾನಿಸಲಾಗಿರುವುದಿಲ್ಲ.

ಲೂಕ 10:18ರಲ್ಲಿ ಆತನು ಅವರಿಗೆ ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು ಎಂದು ಯೇಸು ಹೇಳಿದನು. ಇದರಲ್ಲಿ ಸೈತಾನನ ಕುರಿತಾಗಿ ಹೇಳಲಾಗಿದೆ. ಇದನ್ನು ಪರಿಶೀಲಿಸಿದಾಗ, ಯೇಸು ಕ್ರಿಸ್ತನ ಅದ್ಭುತವಾದ ಶಕ್ತಿಯನ್ನು ಎಪ್ಪತ್ತು ಜನ ಶಿಷ್ಯರಿಗೆ ನೀಡುವ (ಅಥವಾ 72) ಮುಖಾಂತರ ಸೈತಾನನನ್ನು ಕೆಳಕ್ಕೆ ದೊಬ್ಬಲಾಯಿತು ಎಂದು ತಿಳಿಸಲಾಗಿದೆ.

ಪರಲೋಕದಿಂದ ದೊಬ್ಬಲ್ಪಟ್ಟ ದೇವದೂತನು ಎಂದು ಸೈತಾನನಿಗೆ ಹೇಳಲಾಗಿರುವುದಿಲ್ಲ.

ಸೈತಾನನ ಮೂಲದ ಕುರಿತಾಗಿ ಪ್ರಕಟನೆ 12 ಇನ್ನೊಂದು ವಾಕ್ಯ ಭಾಗವಾಗಿದೆ. ಉನ್ನತವಾದ ಸಾಂಕೇತಿಕ ಪುಸ್ತಕದಲ್ಲಿನ, ಉನ್ನತ ಸಾಂಕೇತಿಕ ಭಾಗವಾಗಿರುತ್ತದೆ. ಸೈತಾನನು ದೇವರಿಗೆ ವಿರುದ್ಧವಾಗಿ ಯುದ್ಧ ಮಾಡುವನು ಮತ್ತು ಅವನು ಭೂಲೋಕಕ್ಕೆ ತಳ್ಳಲ್ಪಡುವನು. ಸೂರ್ಯನನ್ನು ಧರಿಸಿರುವ ಸ್ತ್ರೀ ಗಂಡು ಮಗುವಿಗೆ ಜನ್ಮ ನೀಡುವಳು, ಅದು ಸಹಜವಾಗಿ ಕ್ರಿಸ್ತನಿಗೆ ಸೂಚನೆಯಾಗಿರಬಹುದು. ಅಕ್ಷರಶಃವಾಗಿ ಇದನ್ನು ತಿಳಿಯುವವರು, ಹೇಗೆ ಅಕ್ಷರಶಃವಾಗಿ ಸ್ತ್ರೀ ಸೂರ್ಯನನ್ನು ಧರಿಸುವಳು ಎಂಬುದಾಗಿಯೂ ತಿಳಿಯಬಹುದು. ಆದಾಗ್ಯೂ ಸೈತಾನನ ಮೂಲದ ಕುರಿತಾಗಿ ಬೈಬಲ್ ಏನನ್ನೂ ತಿಳಿಸುವದಿಲ್ಲ; 2:4ರಲ್ಲಿ ತೋರಿಸಿರುವುದು ಇಷ್ಟೆ.

ದೇವದೂತರು ನರಕಕ್ಕೆ ತಳ್ಳಲ್ಪಟ್ಟನು ಎಂದು ಪೇತ್ರನು ತಿಳಿಸಿದಾಗ, ಬೈಬಲ್ ಈ ಭಾಗದಲ್ಲಿ ಮಾತ್ರ, ಇದರ ಪದಪ್ರಯೋಗವಾಗಿದೆ. ಕ್ರಿಯಾಪದದ "ಟಾರ್ಟರಸ್" ಗ್ರೀಕರ ಪುರಾಣದಲ್ಲಿರುವ ಪಾತಾಳದ ತಳಭಾಗ ಪೇತ್ರನು "ಟಾರ್ಟರಸ್" ಎಂಬ ಒಂದು ನಿರ್ಧಿಷ್ಟವಾದ ಸ್ಥಳದ ಬಗ್ಗೆ ಬರೆಯುತ್ತಿದ್ದಾನೆ ಎಂದು ವಿದ್ಯಾರ್ಥಿಗಳು ಸಲಹೆಯನ್ನು ಹೇಳ ಬಹುದು, ಸರಿ ಅದನ್ನು ನಿರಾಕರಿಸುವ ಹಾಗಿಲ್ಲ, ಅದು ಕಾರ್ಯಕ್ಕಾಗಿ ಉಪಯೋಗಿಸಿದ ಪದ, ಅದರಿಂದ ಪಾತಾಳದ ಕುರಿತಾದ ನೀಲಿ ನಕ್ಷೆಯನ್ನು ಸಂದೇಹಿ ಸಬಹುದು. ಸಂದೇಹವು ಹಾನಿಕರವಲ್ಲ, ಆದರೆ ಅದರ ಮೇಲೆ ಕ್ರೈಸ್ತ ಸಿದ್ಧಾಂತಗಳನ್ನು ನಿರ್ಮಿಸಬಾರದು ಅಥವಾ ನಾವು ಸಂದೇಹಿಸುವಾಗ ದೇವರ ವಾಕ್ಯದ ಬೋಧನೆಗಳನ್ನು ಕಳಕೊಂಡು ಬಿಡುತ್ತೇವೆ, ದೇವರು ದೇವದೂತರನ್ನು ಉಳಿಸಲಿಲ್ಲ ಎಂದು ಪೇತ್ರನು ತಿಳಿಸುತ್ತಾನೆ. ಆತನು ಸುಳ್ಳು ಪ್ರವಾದಿಗಳನ್ನು ಉಳಿಸುವದಿಲ್ಲ ಎಂಬುದು ನಮ್ಮ ಮುಖ್ಯ ಅಂಶವಾಗಿರುತ್ತದೆ.

ದೇವರು, ದೇವದೂತರನ್ನು ನ್ಯಾಯತೀರ್ಪಿಗೆ ಒಳಪಡಿಸಿದನು ಎಂದು ಪೇತ್ರನ ಓದುಗರಿಗೆ ಸ್ಪಷ್ಟವಾಗಿ ತಿಳಿದಿತ್ತು, ಒಂದು ವೇಳೆ ನಮಗೆ ತಿಳಿಯದಿರಬಹುದು. ಅವನ ಮುಂದಿನ ದೃಷ್ಟಾಂತ, ಅವನ ಓದುಗರಿಗೆ ಪರಿಚಿತವಿದ್ದಂತೆ ನಮಗೂ ಪರಿಚಿತವಿದೆ. ದೇವರು ನೋಹನ ದಿನಗಳ, ಜಲಪ್ರಳಯದ ಪ್ರಾಚೀನ ಪ್ರಪಂಚವನ್ನು ಉಳಿಸಲಿಲ್ಲ ಎಂದು ಅಪೊಸ್ತಲನು ತಿಳಿಸಿದ್ದಾನೆ (2:5). KJVಯಲ್ಲಿ ಕೆಲವು ವಿವರಣೆಗಳಿವೆ. "ದೇವರು ಎಂಟನೆಯವನಾದ ನೋಹನನನ್ನ" ರಕ್ಷಿಸಿದನೆಂದು ತಿಳಿಸುತ್ತದೆ. ಯಾವ ರೀತಿಯಲ್ಲಿ ನೋಹನು ಎಂಟನೆಯವನಾಗಿದ್ದನು? ಅದು ಎಂಟನೆಯ ತಲೆಮಾರು ಎಂಬುದಾಗಿ ಇರುವದಿಲ್ಲ, ಯಾಕಂದರೆ ನೋಹನು ಆದಾಮನಿಂದ ಹತ್ತನೆಯ ತಲೆಮಾರಿನವನಾಗಿದ್ದನು. 1 ಪೇತ್ರ 3:20 ಒಂದು ಮೂಲವನ್ನು ನೀಡುತ್ತದೆ; ಜಲ ಪ್ರಳಯ ಉಂಟಾದಾಗ ಎಂಟು ಜನರು ರಕ್ಷಿಸಲ್ಪಟ್ಟರು. 2:5ರ ಅರ್ಥ ನೋಹ ಮತ್ತು ಉಳಿದ ಏಳು ಜನರು, ಒಟ್ಟು ಎಂಟು ಜನರು ರಕ್ಷಿಸಲ್ಪಟ್ಟರು.

ಅಬ್ರಹಾಮನ ಸಮಯದ ಮೂರನೇ ದೃಷ್ಟಾಂತವನ್ನು ಪೇತ್ರನು ತಿಳಿಸುತ್ತಿದ್ದಾನೆ. ಸೋದೋಮ್ ಮತ್ತು ಗೋಮೇರ್ ಎಂಬ ಪುರಾತನ ಪಟ್ಟಣಗಳನ್ನು ದೇವರು ತೀರ್ಪು ಮಾಡಿದನು, ಜಲಪ್ರಳಯದ ಹಿಂದಿನ ಜನರನ್ನು ಹಾಗೂ ದೇವದೂತರಿಗೆ ತೀರ್ಪುನೀಡಿದಂತೆಯೇ (2:6-8). ನೋಹನನನ್ನು ಬಿಡುಗಡೆ ಮಾಡಿದಂತೆಯೇ ದೇವರು ಲೋಟನನ್ನು ಸಹ ಬಿಡುಗಡೆ ಮಾಡಿದನು. ನೀತಿವಂತರನ್ನು ರಕ್ಷಿಸಿ, ಅನೀತಿವಂತರಿಗೆ ನ್ಯಾಯ ತೀರ್ಪು ನೀಡಲು ದೇವರಿಗೆ ತಿಳಿದಿತ್ತು (2:9). ಆತನು ಯಾವಾಗಲು ಈ ರೀತಿ ಮಾಡುತ್ತಿದ್ದನು, ಆತನು ತಿರಿಗಿ ಅದನ್ನು ಮಾಡುತ್ತಾನೆ. ಆಸ್ಯ ಸೀಮೆಯ ಸಭೆಯನ್ನು ತೊಂದರೆಗೆ ಒಳಪಡಿಸಿದ ಸುಳ್ಳು ಪ್ರವಾದಿಗಳಿಗೂ ದೇವರು ಇದನ್ನು ಮಾಡುತ್ತಾನೆ.

## ಸುಳ್ಳು ಪ್ರವಾದಿಗಳು ಧೈರ್ಯವುಳ್ಳವರು ಹಾಗೂ ಸ್ವ-ಚಿತ್ತವುಳ್ಳವರು (2:10-16)

ಕೆಲವು ಸಾರಿ ಯಥಾರ್ಥವಾದ ಕ್ರೈಸ್ತನು ಸಹ ಬೋಧನೆಗಳ ಕುರಿತು ಹಲವಾರು

ಪ್ರಶ್ನೆಗಳನ್ನು ಹೊಂದಿರುತ್ತಾನೆ, ಅವನು ಪ್ರಶ್ನೆಮಾಡುವಲ್ಲಿ, ಬೈಬಲ್ ಬೋಧನೆಗೆ ತದ್ವಿರುದ್ಧ ವಾದ ಆಲೋಚನೆಗಳನ್ನು ನೀಡುತ್ತಾನೆ. ಇಂಥ ಸಮಯದಲ್ಲಿ ಪರಿಪಕ್ವವಾದ ಕ್ರೈಸ್ತನು ಸಾತ್ವೀಕ ಮನಸ್ಸಿನಿಂದ ಅವನಿಗೆ ಉತ್ತರ ನೀಡಬೇಕಾಗುತ್ತದೆ, ತಿಳಿವಳಿಕೆಗೆ ಮೂಲವಾದ ಬೈಬಲ್‌ನ್ನು ಉಪಯೋಗಿಸಬೇಕಾಗುತ್ತದೆ. ನಾಶಕರವಾದ ಬೋಧನೆಗಳನ್ನು ಮಾಡುತ್ತಿರುವವರು ಅನುಭವಿಗಳಾದ ಯೌವನಸ್ಥರಾಗಲೀ, ಅಥವಾ ಸತ್ಯವನ್ನು ಅನ್ವೇಷಣೆ ಮಾಡುತ್ತಿರುವ ಯಥಾರ್ಥವಾದ ಜನರಾಗಲೀ ಆಗಿರುವದಿಲ್ಲ. ಅವರು ಪೇತ್ರನ ಓದುಗರನ್ನು ನಾಶಮಾಡುವ ಹಾಗಿದ್ದರಿಂದ, ಅವರನ್ನು ಬಲವಾಗಿ ಎದುರಿಸಬೇಕಿತ್ತು.

**ಅವರು ಸೊಕ್ಕಿನವರಾಗಿದ್ದರು**

ಯಥಾರ್ಥವಾದ ಪ್ರಶ್ನೆಗಳ ಮೂಲಕ ಬೆಳವಣಿಗೆಯ ಮಾರ್ಗವನ್ನು ತಿಳಿಯಲು, ಕೆಲವರು ಬಯಸುತ್ತಾರೆ. ನಮ್ಮ ಮನಸ್ಸಿನಲ್ಲಿರುವ ಪ್ರಶ್ನೆಗಳನ್ನು ಕೇಳುವಾಗ ಸಮಸ್ಯೆಯು ಉದ್ಭ ವಿಸುತ್ತದೆ. ನಾವು ಸರಿಯಾದ ಕಾರಣವನ್ನು ತಿಳಿಯದೆ, ನಮ್ಮ ಕಾರಣಗಳನ್ನು ಪ್ರತಿಪಾದಿಸುವ ರಾಗಿದ್ದೇವೆ. ಈ ರೀತಿಯ ಮನೋಭಾವಕ್ಕೆ ನಾವು ಇಳಿದು ಹೋಗುತ್ತೇವೆ. ನನ್ನ ಮೇಜಿನ ಮೇಲೆ ನಗೆ ದಾಯಕವಾದ ಒಂದು ಹೇಳಿಕೆ ಇದೆ, “ಎಲ್ಲವನ್ನು ತಿಳಿದಿದ್ದೇವೆ ಎನ್ನುವವರು, ತಿಳಿದಿರುವವರನ್ನು ಸಿಟ್ಟಿಗೆ ನಡೆಸುತ್ತಾರೆ.” ಅನೇಕ ಸಾರಿ ಧೈರ್ಯವುಳ್ಳವರು ತಮ್ಮನ್ನು ತಾವೇ ತಿಳುಕೊಳ್ಳುವುದು ಕಷ್ಟಕರವಾಗಿರುತ್ತದೆ.

ಸೊಕ್ಕಿನಿಂದ ಇರುವುದು, ಸುಳ್ಳು ಪ್ರವಾದಿಗಳ ಸಂಕೇತವಾಗಿರುತ್ತದೆ: “... ಅವರು ಬಂಡುತನದಿಂದ ಪ್ರಭುತ್ವ ತಿರಸ್ಕಾರ ಮಾಡುತ್ತಾರೆ. ಇವರು ಯಾರಿಗೂ ಹೆದರದೆ ಸ್ವೇಚ್ಛಾಪರರಾಗಿರುತ್ತಾರೆ” (2:10) NIVಯಲ್ಲಿ “ಅವರು ಮಹಾಪದವಿಯವರನ್ನು ನಿರ್ಭಯ ವಾಗಿ ದೂಷಿಸುತ್ತಾರೆ” KJVಯಲ್ಲಿ, “ಒಳ್ಳೆಯದಕ್ಕೆ ಅವರು ಕೆಟ್ಟದ್ದಾಗಿ ಮಾತನಾಡುತ್ತಾರೆ.” ಅದು ಒಂದು ವೇಳೆ ದೇವದೂತರ ಅಥವಾ ಮಾನವರ ಗೌರವದ ಕುರಿತಾಗಿಯೂ ಇರಬಹುದು. ಅವರಿಗಿತಂಲೂ, ಇತರರು ಹೊಂದಿರುವ ಅಧಿಕಾರ, ಪ್ರಭಾವ ಅಥವಾ ತಿಳುವಳಿಕೆಯುಳ್ಳವನನ್ನು ಸುಳ್ಳು ಪ್ರವಾದಿಗಳು ಗೌರವಿಸುವದಿಲ್ಲ (2:11). ತಮಗೆ ತಿಳಿಯದವುಗಳ ವಿಷಯವಾಗಿ ದೂಷಣೆ ಹೇಳುವವರಾಗಿದ್ದಾರೆ (2:12). ಅವರು ಕಲಿಯುವವರ ವಿಷಯದಲ್ಲಿ ವಿಷಾದ ವ್ಯಕ್ತಪಡಿಸು ತ್ತಾರೆ. ಅವರ ಅನುಭವ ಮತ್ತು ದೈವ ಭಕ್ತಿಯನ್ನು ಸಹ ದ್ವೇಷಿಸುತ್ತಾರೆ. ದೇವದೂತರು ಸಹ ಮೌನವಾಗಿರುವಲ್ಲಿ ಸುಳ್ಳು ಪ್ರವಾದಿಗಳು ದೂಷಣೆಯನ್ನು ದೂರಲೋಚನೆಯನ್ನು ಮಾಡು ತ್ತಾರೆ.

**ಅವರು ಎಲ್ಲದರಲ್ಲಿಯೂ ತೂರುವವರಾಗಿದ್ದಾರೆ**

ಸುಳ್ಳು ಪ್ರವಾದಿಗಳ ವೈಯಕ್ತಿಕವಾದ ಜೀವಿತವನ್ನು ಪರಿಶೀಲಿಸಿರಿ ಎಂದು ಪೇತ್ರನು ತನ್ನ ಓದುಗರಿಗೆ ತಿಳಿಸಿದನು. ಸುಳ್ಳು ಪ್ರವಾದಿಗಳು ಲಜ್ಜೆಗೆಟ್ಟವರು ಎಂದು ತಿಳಿಸಲಾಗಿದೆ, ಪ್ರಪಂಚದಲ್ಲಿರುವ ಇತರರು ರಾತ್ರಿಕಾಲದಲ್ಲಿ ನಡೆಸುವ ಕಾರ್ಯಗಳನ್ನು ಇವರು ಹಗಲಿನಲ್ಲೆ ಮಾಡುವವರಾಗಿದ್ದಾರೆ. ದೇವರ ಮಕ್ಕಳ ಸೇರುವಿಕೆಯಲ್ಲಿ ಇವರು ವಂಚಕರು ಮತ್ತು ದೋಷಿಗಳು ಆಗಿದ್ದಾರೆ (2:12-14).

“ಇವರು ನೀಟಾದ ಮಾರ್ಗವನ್ನು ಬಿಟ್ಟವರು” ಎಂಬ ಪೇತ್ರನ ವ್ಯಾಖ್ಯಾನವು ಅವರು ಒಂದು ಕಾಲದಲ್ಲಿ ನಂಬಿಕೆಯಲ್ಲಿ ಇದ್ದವರು ಎಂಬುದಾಗಿ ತಿಳಿಸುವದಿಲ್ಲ (2:15). ಅವರ ಜೀವನ ಮಾರ್ಗವು ನೀಟಾದ ಮಾರ್ಗವನ್ನು ಬಿಟ್ಟುಬಿಡುವುದಾಗಿತ್ತು. ಸುಳ್ಳು ಪ್ರವಾದಿಗಳ ಸಾಮಾನ್ಯವಾಗಿ ಚಪಲ ಚಿತ್ತರನ್ನು ಆರಿಸಿಕೊಂಡು ಅವರ ಸ್ವಂತ ಲಾಭಕ್ಕೋಸ್ಕರ ಬೇರೆ ಯವರನ್ನು ಅಪಹರಿಸಿಕೊಳ್ಳುವರು. ಈ ವಿಷಯದಲ್ಲಿ ಅವರು ಅವರ ಪೂರ್ವಿಕನಾದ ಬಾಳಾ ಮನೆಂಬ ಪ್ರವಾದಿಯ ಅನೈತಿಕ ಲಾಭದ ಮಾರ್ಗವನ್ನು ಹಿಂಬಾಲಿಸುತ್ತಾರೆ (2:15, 16).

## ಸುಳ್ಳು ಪ್ರವಾದಿಗಳು ಭ್ರಷ್ಟತನಕ್ಕೆ ಗುಲಾಮರಾಗಿದ್ದಾರೆ (2:17-22)

ಅಧ್ಯಾಯ 2ರಲ್ಲಿ ಕಾಣಿಸಿರುವ ಸುಳ್ಳು ಪ್ರವಾದಿಗಳ ವಿವರಣೆಯನ್ನು ಯೂದನ ಪತ್ರಿಕೆಯಲ್ಲಿಯೂ ಗಮನಿಸುತ್ತೇವೆ. ಯೂದ ಪತ್ರಿಕೆಯ ನಿರಿಲ್ಲದ ಒರತೆಗಳು ಮತ್ತು ಪೇತ್ರನ ನೀರಿಲ್ಲದ ಮೋಡಗಳ ನಡುವೆ ಒಂದು ಚಿಕ್ಕ ವ್ಯತ್ಯಾಸವನ್ನು ನೋಡುತ್ತೇವೆ. ಪೂರ್ವ ಪ್ರದೇಶಗಳ ಹತ್ತಿರ ಹವಾಮಾನವು ಅತಿಬಿಸಿಯಾಗಿಯೂ ಮತ್ತು ಒಣಗಿದ ಹವದಿಂದಲೂ ಕೂಡಿರುತ್ತದೆ. ಮೆಡಿಟರೇಲಿಯನ್ ಸಮುದ್ರದಲ್ಲಿ ಕೂಡಿ ಬರುವ ಮೋಡವು ಮತ್ತು ಮರಳುಗಾಡಿನ ತಗ್ಗಿನ ನೀರು ಹಿತವನ್ನು ನೀಡುತ್ತದೆ. ಈ ಮನುಷ್ಯರ ಬೋಧನೆಗಳು ಹಿತವನ್ನು ತರಲಿಲ್ಲ (2:17). ಪ್ರಕಟನೆಯ ಅಂತ್ಯದ ವಾಕ್ಯಗಳೊಂದಿಗೆ ಇದನ್ನು ಹೋಲಿಸುವುದು ಆಸಕ್ತಿಕರವಾಗಿದೆ: "ಬಾಯಾರಿದವನು ಬರಲಿ, ಇಷ್ಟವುಳ್ಳ ವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದು ಕೊಳ್ಳಲಿ" (ಪ್ರಕಟನೆ 22:17).

ಆ ಸುಳ್ಳು ಪ್ರವಾದಿಗಳ ಪೈಕಿ ನುರಿತರಾದ ಕೆಲವು ಬೋಧಕರುಗಳನ್ನು ಪೇತ್ರನು ಎದುರಿಸಿದನು (2:18). ಮುಂದೆ, ಅವನ ಓದುಗರಲ್ಲಿಯು ಕೆಲವು ಬೋಧನೆಯನ್ನು ಹೊಂದಿದವರು ಮತ್ತು ಪರಿಪಕ್ವತೆಗೆ ಬಾರದವರು ಇದ್ದರು. ಅವರು ಆಗತಾನೇ ಪ್ರಪಂಚದ ಆಶಾಪಾಶದಿಂದ ತಪ್ಪಿಸಿಕೊಂಡವರಾಗಿದ್ದರು. ಇವರೊಂದಿಗೆ ಸುಳ್ಳು ಪ್ರವಾದಿಗಳು ದೊಡ್ಡ ದೊಡ್ಡ ಮಾತುಗಳನ್ನಾಡಿ, ಬಂಡು ಬಂಡಾದ ದುರಾಶೆಗಳನ್ನು ಹುಟ್ಟಿಸಿ ಅವರನ್ನು ಮರುಳುಗೊಳಿಸುತ್ತಾರೆ (2:19). ತಮ್ಮ ಆತ್ಮಗಳಿಗೋಸ್ಕರವಾಗಿ, ಕ್ರೈಸ್ತರನ್ನು ಪ್ರಬೋದಿಸುವ ಮತ್ತು ಮನರಂಜಿಸಲು ಬೋಧಿಸಲ್ಪಡುವ ತಂತ್ರಗಳ ಮತ್ತು ರಹಸ್ಯಗಳನ್ನು ವ್ಯತ್ಯಾಸವನ್ನು ವಿಂಗಡಿಸಿ ತಿಳಿದುಕೊಳ್ಳಬೇಕು.

ಪೇತ್ರನ ಓದುಗರನ್ನು ಕ್ರಿಸ್ತನಿಂದ ಪ್ರತ್ಯೇಕಿಸಿದ ಸುಳ್ಳು ಪ್ರವಾದಿಗಳ ಬೋಧನೆಯ ಸಾರಾಂಶ "ಸ್ವಾತಂತ್ರ"ವಾಗಿತ್ತು. ಸ್ವಾತಂತ್ರದ ಹೆಸರಿನಲ್ಲಿ ಪಡೆದುಕೊಳ್ಳುವ ಗುಲಾಮತನ ಮತ್ತು ಬೇಸರಿಕೆಯು ವ್ಯತ್ಯಾಸವುಳ್ಳ ಕಾರ್ಯವಾಗಿರುತ್ತದೆ. ಕರ್ತನು ಹೆಚ್ಚಾಗಿ ಹೇಳಿದ ಸತ್ಯವೇನೆಂದರೆ; ಒಬ್ಬನು ತನ್ನನ್ನು ಒಪ್ಪಿಸಿಕೊಟ್ಟರೆ ಮಾತ್ರ ಜೀವವನ್ನು ಪಡೆಯುತ್ತಾನೆ. "ಗೋದಿಯ ಕಾಳು" ಜೀವಿಸುವದಕ್ಕಿಂತ ಮೊದಲು ಸಾಯಬೇಕು (ಯೋಹಾನ 12:24). ಪ್ರಾಥಮಿಕ ವ್ಯತ್ಯಾಸದ ಮಾತುಗಳು ಇರಬಹುದು, ಆದರೆ ಆ ಪದದ ಮುಖ್ಯ ಸಂದೇಶ ಮತ್ತಾಯ 10:39; 16:25; ಮಾರ್ಕ 8:35; ಲೂಕ 9:24; 14:26; 17:33; ಮತ್ತು ಯೋಹಾನ 12:25ರಲ್ಲಿ ಅಡಕವಾಗಿದೆ.

ಕೆಲವು ಸ್ವಾತಂತ್ರವು ಸ್ವಾಭಾವಿಕವಾಗಿ, ಇತರೆ ಸ್ವಾತಂತ್ರವನ್ನು ಇಲ್ಲದಂತೆ ಮಾಡುತ್ತದೆ. ಸಂತೋಷಕರವಾದ ದಾಂಪತ್ಯ ಜೀವನವು, ದಾಂಪತ್ಯ ಬಾಹಿರವಾದ ಕಾರ್ಯವನ್ನು ಮಾಡದಂತೆ ಮಾಡುತ್ತದೆ. ಸ್ಥಿರಮನಸ್ಸನ್ನು ಮತ್ತು ಉತ್ತಮ ಆರೋಗ್ಯ ವನ್ನು ನೀಡುವ ಸ್ವಾತಂತ್ರವು, ಕುಡಿತದ ಸ್ವಾತಂತ್ರದಿಂದ ಬಿಡುಗಡೆ ಮಾಡುತ್ತದೆ. ಯಥಾರ್ಥತೆಯನ್ನು ಮತ್ತು ಸ್ವಾಭಿಮಾನದ ಸ್ವಾತಂತ್ರ ಹೊಂದಿರುವ ಸ್ತ್ರೀ ಪುರುಷರು ಸುಳ್ಳೆಳುವ, ಕದಿಯುವ ಮತ್ತು ಮೋಸ ಮಾಡುವ ಸ್ವಾತಂತ್ರದಿಂದ ಬಿಡುಗಡೆಯನ್ನು ನೀಡುತ್ತದೆ. ಯಾವ ಸ್ವಾತಂತ್ರವು ಉತ್ತಮವಾದದ್ದು ಎಂದು ಪ್ರತಿಯೊಬ್ಬನು ನಿರ್ಣಯಿಸಬೇಕು. ಆಸ್ಯ ಸೀಮೆಯಲ್ಲಿ ವಾಗ್ದಾನಗಳ ಸ್ವಾತಂತ್ರವನ್ನು ನೀಡುತ್ತಿದ್ದ ಸುಳ್ಳು ಪ್ರವಾದಿಗಳು ತಾವೇ ಗುಲಾಮರಾಗಿದ್ದರು. ನಂತರ ಈ ಹೀನವಾದ ವ್ಯಾಖ್ಯಾನವನ್ನು ತಿಳಿಸಿದನು. "ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವ ದೊಳಗಿರುವ ನಷ್ಟೆ" (2:19). ಹೊಸ ಒಡಂಬಡಿಕೆಯನ್ನು ಪ್ರೇರಣೆಯಿಂದ ಬರೆದ ದೇವ ಜನರು ಕ್ರೈಸ್ತ ಸ್ವಾತಂತ್ರವು ಸ್ವಾರ್ಥ - ಚಿಂತಕರಿಗೆ ಪರವಾನಿಗೆ ಎಂದು ತಿಳಿಸಲಿಲ್ಲ. ಸುವಾರ್ತೆಯ ಕುರಿತು ಯಾಕೋಬನು ಮಾತನಾಡಿ, "ಬಿಡುಗಡೆಯನ್ನು ಉಂಟು ಮಾಡುವ ಸರ್ವೋತ್ತಮ ಧರ್ಮಪ್ರಮಾಣ" (ಯಾಕೋಬ 1:25; 2:12) ಎಂದು ತಿಳಿಸಿದ್ದಾನೆ ಪೌಲನು ಇದರ ಕುರಿತಾಗಿ, "ಯಾಕಂದರೆ ಜೀವವನ್ನುಂಟು ಮಾಡುವ

ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು" (ರೋಮಾಪುರ 8:2).

ಸುಳ್ಳು ಬೋಧಕರ ಅಪಘಾತವೇನೆಂದರೆ, ನೂತನವಾದವರನ್ನು ತಮ್ಮ ಬೋಧನೆಗಳಿಗೆ ವಶಪಡಿಸಿದ ನಂತರ, ಅವರನ್ನು ದೇವರ ರಾಜ್ಯದಿಂದ ನಿರಂತರ ವಾಗಿ ಪ್ರತ್ಯೇಕಿಸುವ ಪರಿಣಾಮವನ್ನು ಉಂಟು ಮಾಡಿದ್ದಾರೆ. ಪೇತ್ರನು, "ಅವರು ನೀತಿ ಮಾರ್ಗವನ್ನು ತಿಳಿದು ತಮಗೆ ಕೊಡಲ್ಪಟ್ಟ ಪರಿಶುದ್ಧ ಆಜ್ಞೆಯಿಂದ ತೊಲಗಿ ಹೋಗು ವದಕ್ಕಿಂತ, ಆ ಮಾರ್ಗವನ್ನು ತಿಳಿಯದಿದ್ದರೆ ಮೇಲಾಗಿತ್ತು" (2:21). ಎಂದು ಹೇಳಿದ್ದಾನೆ. ನೂತನರಾದವರ ಬಳಿಯಿಂದ ಕ್ರಿಸ್ತನನ್ನು ಪ್ರತ್ಯೇಕಿಸಲ್ಪಡುವುದು ಕ್ರಿಸ್ತನನ್ನು ನಂಬಿದವರಿಂದ, ಮತ್ತು ಕ್ರಿಸ್ತನನಾಮದಿಂದ ಪ್ರತ್ಯೇಕಿಸಲ್ಪಡುವುದು ಅವನಿಗೆ ಕಲಹದ ಮತ್ತು ನಾಶನಕರ ವಾದ ಸಂಗತಿಯಾಗಿರುತ್ತದೆ. ಕ್ರಿಸ್ತನನ್ನು ನಂಬಿದವನು ಬೇಸರದಿಂದ ಪ್ರಪಂಚಕ್ಕೆ ತಿರುಗಿ ವಶವಾಗುವ ಕುರಿತು, ಪೇತ್ರನು ಸೊಲೊಮೋನನ ಜ್ಞಾನೋಕ್ತಿಗಳಿಂದ (ಜ್ಞಾನೋಕ್ತಿ 26:11) ಮತ್ತು ತನ್ನ ಸಮಕಾಲಿನ ಪ್ರಪಂಚದಿಂದ ಪಡೆದ ವಿಷಯದಂತೆ, ನಾಯಿ ತಾನು ಕಕ್ಕಿದ್ದನ್ನು ನೆಕ್ಕುವದಕ್ಕೆ ತಿರುಗಿಕೊಂಡಿತು ಮತ್ತು ತೊಳೆದ ಹಂದಿ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು ಎಂಬ ನಿಜವಾದ ಗಾದೆಗೆ ಸರಿಯಾಗಿ ನಡೆದಿದ್ದಾನೆ ಎಂದು ತಿಳಿಸಿರುವನು (2:22).

## ಮುಕ್ತಾಯ

ಪೇತ್ರನು ತನ್ನ ಮೊದಲ ಪತ್ರಿಕೆಯನ್ನು, ಕ್ರೈಸ್ತನು ಅನುಭವಿಸುತ್ತಿದ್ದ ಬಾಧೆಗಳಲ್ಲಿ ಬಲವರ್ಧನೆ ಪಡೆಯಬೇಕೆಂದು ಬರೆದನು. 2 ಪೇತ್ರನ ಸಮಸ್ಯೆಗಳಿಗೆ ಹೋಲಿಸುವುದಾ ದರೆ, ಇದು ಸಂತೋಷಕರವಾದ ಕಾರ್ಯವಾಗಿತ್ತು. ಸಭೆಯು ಬಾಧೆಗಳಿಗೆ ಒಳಪಟ್ಟಾಗ ಅದರ ಮೇಲೆ ಜಯವನ್ನು ಸಾಧಿಸಿತ್ತು, ಮತ್ತು ನಾಶಮಾಡುವ ಶಕ್ತಿಗಳಿಗೂ ವಿರುದ್ಧವಾಗಿ ಜಯ ಸಾಧಿಸಿತ್ತು. ಕ್ರಿಸ್ತನ ಸಭೆಯು ಕರ್ತನಿಗಾಗಿ ಪ್ರಪಂಚದಲ್ಲಿ ಪ್ರಭಾವ ಬೀರಬೇಕಾದರೆ, ಸಭೆಯೊಳಗಿಂದ ಉದ್ಭವಿಸುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕು.